ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority
GST : 29AAALV0060D1ZS

ಬೆಂಅಪ್ರಾ/ನಯೋಸ/PRL-01/2021-22/ 3324 /2022-23.

ಸಂಖ್ಯೆ:
No: C.N. 153567.

ದಿನಾಂಕ:
Date: 21/02/2023

## ಅಂತಿಮ ವಸತಿ ಬಡಾವಣೆ ನಕ್ಷೆ ಮತ್ತು ಅಂತಿಮ ವಸತಿ ನಿವೇಶನಗಳ ಬಿಡುಗಡೆ ಆದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-B]ರ ಅಡಿಯಲ್ಲಿ]

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ/22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-ಬಿ) ರ ಅಡಿಯಲ್ಲಿ ಶ್ರೀ. ರಮೇಶ್.ಬಿ.ಕೆ. ಮತ್ತು ಇತರರ ಜಿಪಿಎದಾರರಾದ ಮೆ: ಎಂ.ಆರ್.ಇನ್ಫ್ರಾ ರವರು ಅಂತಿಮ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಲು ಕೋರಿರುವ ಬಗ್ಗೆ.

**ಉಲ್ಲೇಖ**
1. ಅರ್ಜಿದಾರರ ಮನವಿ ದಿನಾಂಕ 07.04.2021.
2. ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 62/ 2021, ದಿನಾಂಕ 17.07.2021.
3. ಈ ಕಛೇರಿಯ ತಾತ್ಕಾಲಿಕ ವಸತಿ ಬಡಾವಣೆಯ ಕಾರ್ಯಾದೇಶದ ಸಂಖ್ಯೆ ಬೆಂಅಪ್ರಾ/ನಯೋಸ/PRL-01/1336/2021-22, ದಿನಾಂಕ 30.11.2021.
4. ಅರ್ಜಿದಾರರು ಕಾರ್ಯಪಾಲಕ ಅಭಿಯಂತರರು, ದಕ್ಷಿಣ ಉಪ ವಿಭಾಗ ರವರಿಗೆ ಸಲ್ಲಿಸಿರುವ ಮನವಿ ಪತ್ರ ದಿನಾಂಕ 26.12.2022.
5. ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ನೊಂದಣಿ ಸಂಖ್ಯೆ PRM/KA/RERA/1251/310/PR/050822/005133, ದಿನಾಂಕ 05.08.2022
6. ಕಾರ್ಯಪಾಲಕ ಅಭಿಯಂತರರು ದಕ್ಷಿಣ-ಪಶ್ಚಿಮ-2, ಬೆಂಗಳೂರು ಜಲಮಂಡಳಿ, ಶೀಂಷಾ ಭವನ, ಸಂಗಮ್ ವೃತ್ತ, ಬೆಂಗಳೂರು-560 078 ರವರ ಪತ್ರ ಸಂಖ್ಯೆ BWSSB/EESW-2/TO/PB/1167/2022-23, ದಿನಾಂಕ 29.12.2022.
7. Deputy Chief Electrical Inspector, Bangalore South, ಬೆಂಗಳೂರು ರವರ ಪತ್ರ ಸಂಖ್ಯೆ ACEI/BS/DCEI/AEI[2]/TEC( ) /F-1/ 4293/22-23, ದಿನಾಂಕ 19.12.2022
8. ಅಭಿಯಂತರ ಸದಸ್ಯರು, ಬೆಂಅಪ್ರಾ, ಬೆಂಗಳೂರು ರವರ ಪ್ರಸ್ತಾವನೆ ದಿನಾಂಕ 17.11.2022 [PLO No. 185234].

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ / 22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ/22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-ಬಿ) ರ ಅಡಿಯಲ್ಲಿ ಅಂತಿಮ ವಸತಿ ಬಡಾವಣೆ ನಕ್ಷೆ ಅನುಮೋದನೆಯನ್ನು ಶ್ರೀ. ರಮೇಶ್.ಬಿ.ಕೆ. ಮತ್ತು ಇತರರ ಜಿಪಿಎದಾರರಾದ ಮೆ: ಎಂ.ಆರ್.ಇನ್ಫ್ರಾ ರವರ ಪರವಾಗಿ ನೀಡುವ ಬಗ್ಗೆ.

---

ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಂತೆ ಉಲ್ಲೇಖ [1] ರ ಮನವಿಯಲ್ಲಿ ಕೋರಿದ್ದ ಪ್ರಸ್ತಾವನೆಯನ್ನು ಉಲ್ಲೇಖ [2] ರಂತೆ ದಿನಾಂಕ 17.07.2021 ರಂದು ಜರುಗಿದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ ಸಂಖ್ಯೆ 62/2021 ರಲ್ಲಿ ಚರ್ಚಿಸಿ, ಕೆಲವೊಂದು ಸಾಮಾನ್ಯ ಷರತ್ತುಗಳಿಗೆ ಒಳಪಟ್ಟು, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಉಲ್ಲೇಖ [2] ರ ಸಭೆಯ ತೀರ್ಮಾನದಂತೆ, ಕೆಲವೊಂದು ಷರತ್ತುಗಳಿಗೊಳಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17[2-ಎ] ರ ಅನ್ವಯ ತಾತ್ಕಾಲಿಕ ವಸತಿ ಬಡಾವಣೆ ವಿನ್ಯಾಸ ನಕ್ಷೆ ಅನುಮೋದಿಸಿ ಉಲ್ಲೇಖ [3] ರಲ್ಲಿ ಶ್ರೀ. ರಮೇಶ್.ಬಿ.ಕೆ. ಮತ್ತು ಇತರರ ಜಿಪಿಎದಾರರಾದ ಮೆ: ಎಂ.ಆರ್.ಇನ್ಫ್ರಾ ರವರ ಪರವಾಗಿ ಕಾರ್ಯಾದೇಶ ನೀಡಲಾಗಿರುತ್ತದೆ.

ಅರ್ಜಿದಾರರು ಉಲ್ಲೇಖ [4] ರಂತೆ ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗರವರಿಗೆ ಮನವಿ ಸಲ್ಲಿಸಿ ಶೇ. 100 ರಷ್ಟು ನಿವೇಶನಗಳ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಅರ್ಜಿದಾರರ ಮನವಿ ಮೇರೆಗೆ ಪ್ರಾಧಿಕಾರದ ಅಭಿಯಂತರ ವಿಭಾಗದವರು ಕಾರ್ಯಾದೇಶದ ಷರತ್ತಿನಂತೆ ಹಾಗೂ ತಾತ್ಕಾಲಿಕ ಬಡಾವಣೆ ನಕ್ಷೆಯಂತೆ ಬಡಾವಣೆಯಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಸದರಿ ಬಡಾವಣೆಯಲ್ಲಿ ರಚಿಸಲಾಗಿರುವ ಶೇ. 100 ರಷ್ಟು ಅಂದರೆ 93 ವಿವಿಧ ಅಳತೆಯ ನಿವೇಶನಗಳನ್ನು ಬಿಡುಗಡೆಗೊಳಿಸಲು ಛಾಯಾ ಚಿತ್ರಗಳೊಂದಿಗೆ ಮತ್ತು ಸ್ಥಳ ಪರಿಶೀಲನಾ ವರದಿಯೊಂದಿಗೆ ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಬಡಾವಣೆಯನ್ನು ಉಲ್ಲೇಖ [5] ರಂತೆ ನೊಂದಾಯಿಸಿ ಕೊಂಡಿರುತ್ತಾರೆ. `

ಕಾರ್ಯಪಾಲಕ ಅಭಿಯಂತರರು ದಕ್ಷಿಣ-ಪಶ್ಚಿಮ-2, ಬೆಂಗಳೂರು ಜಲಮಂಡಳಿ, ಶೀಂಷಾ ಭವನ, ಸಂಗಮ್ ವೃತ್ತ, ಬೆಂಗಳೂರು-560 078 ರವರ ಪತ್ರ ಸಂಖ್ಯೆ BWSSB/EESW-2/TO/PB/1167/2022-23, ದಿನಾಂಕ 29.12.2022. ರವರು ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳ ಕುರಿತಂತೆ ನೀರಿನ ಕುರಿತಂತೆ ಉಲ್ಲೇಖ [6] ರಂತೆ ನಿರಾಕ್ಷೇಪಣಾ ಪತ್ರಗಳನ್ನು ನೀಡಿರುತ್ತಾರೆ.

ವಸತಿ ಬಡಾವಣೆ ನಕ್ಷೆಯಲ್ಲಿ ವಿದ್ಯುತ್ ಸರಬರಾಜು ಒದಗಿಸಲು ಮತ್ತು ವಿದ್ಯುತ್ ಕಾರ್ಯಗಳು ಪೂರ್ಣಗೊಂಡಿರುವ ಬಗ್ಗೆ Deputy Chief Electrical Inspector, Bengalore South, Bangalore ರವರ ಪತ್ರ ಸಂಖ್ಯೆ ACET/BS/DCEI/AEI[2]/TEC ( ) /F, ದಿನಾಂಕ 19.12.2022 ರವರು ಉಲ್ಲೇಖ [7] ರಂತೆ ದೃಢೀಕರಣ ಪತ್ರ ನೀಡಿರುತ್ತಾರೆ.

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ/22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-ಬಿ) ರ ಅಡಿಯಲ್ಲಿ ಅಂತಿಮ ವಸತಿ ಬಡಾವಣೆ ನಕ್ಷೆ ಅನುಮೋದನೆಯನ್ನು ಶ್ರೀ. ರಮೇಶ್.ಬಿ.ಕೆ. ಮತ್ತು ಇತರರ ಜಿಪಿಎದಾರರಾದ ಮೆ: ಎಂ.ಆರ್.ಇನ್ಫ್ರಾ ರವರ ಪರವಾಗಿ ನೀಡುವ ಬಗ್ಗೆ.

---

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಅಭಿಯಂತರ ವಿಭಾಗದವರು ಕಂಡಿಕೆ [11] ರಲ್ಲಿ ನೀಡಿರುವ ವರದಿಯ ಮೇರೆಗೆ **ಅಂತಿಮ ವಸತಿ ಬಡಾವಣೆ ನಕ್ಷೆ ಅನುಮೋದನೆ ಮತ್ತು ವಸತಿ ನಿವೇಶನಗಳ ಬಿಡುಗಡೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ** 1961 **ರ ಕಲಂ** 17[2-ಬಿ] **ರ ಅಡಿಯಲ್ಲಿ** ಈ ಕೆಳಕಂಡಂತೆ ಆದೇಶಿಸಲಾಗಿದೆ.

ಪ್ರಸ್ತಾವನೆಯಲ್ಲಿನ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸದಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಪ್ರಾಧಿಕಾರದ ಅಭಿಯಂತರ ವಿಭಾಗದದವರು ಸ್ಥಳ ಪರಿಶೀಲಿಸಿ ನೀಡಿರುವ ವರದಿ ಮೇರೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-ಬಿ] ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲಾಗಿದೆ ಮತ್ತು ಬಡಾವಣೆಯಲ್ಲಿ ರಚಿಸಿರುವ ಶೇ. 100 ರಷ್ಟು ವಿವಿಧ ಅಳತೆಯ ಒಟ್ಟು 93 ನಿವೇಶನಗಳನ್ನು [EWS ನಿವೇಶನಗಳು ಒಳಗೊಂಡಂತೆ] ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ. ಅಂತಿಮ ಅನುಮೋದನೆ ನೀಡಿರುವ ವಿನ್ಯಾಸದ ನಕ್ಷೆಯನ್ನು ಪ್ರಾಧಿಕಾರದ ಮುದ್ರೆಯ ಆದೇಶದೊಂದಿಗೆ ಅಡಕಗೊಳಿಸಲಾಗಿದೆ.

## ಆದೇಶ ಸಂಖ್ಯೆ:ಬೆಂಅಪ್ರಾ/ನಯೋಸ/ PRL-01/2021-22/ ೩೩೭4/2022-23, ದಿನಾಂಕ ೩1 /೭/2023

1. ಅಂತಿಮವಾಗಿ ಅನುಮೋದನೆಯಾದ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ. ಬಡಾವಣೆಯಲ್ಲಿನ ವಸತಿ ನಿವೇಶನಗಳನ್ನು ಅನುಮೋದಿತ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು ಹಾಗೂ ನಿವೇಶನಗಳನ್ನು ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ವಿಭಜನೇ / ಸಮಾಮೇಲನಾ ಮಾಡತಕ್ಕದ್ದಲ್ಲ.
2. ಬಡಾವಣೆಯನ್ನು ಸ್ಥಳೀಯ ಸಂಸ್ಥೆಗೆ ವಹಿಸುವವರೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ನಿರ್ವಹಣೆ ಮಾಡತಕ್ಕದ್ದು ಮತ್ತು ವಿದ್ಯುತ್ ವಾಹಕ ತಂತಿ ಸಾಲು ಸ್ಥಳದಲ್ಲಿ ಅಳವಡಿಸಿದಾಗ ನಿಯಮಾನುಸಾರ ಬಫರ್ ಅಳವಡಿಸಲು ಕ್ರಮವಹಿಸುವುದು.
3. ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಅನುಮೋದನೆ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಸದರಿ ಜಮೀನುಗಳ ಮಾಲಿಕತ್ವಕ್ಕೆ ಸಂಬಂಧಿಸಿದಂತೆ ತಂಟೆ ತಕರಾರು ಅಥವಾ ಸಿವಿಲ್ ವ್ಯಾಜ್ಯಗಳು ಉದ್ಭವವಾದಲ್ಲಿ ಬಡಾವಣೆಯ ಅಭಿವೃದ್ದಿದಾರರೇ ಹೊಣೆಗಾರರಾಗಿರುತ್ತಾರೆ, ಪ್ರಾಧಿಕಾರವು ಜವಾಬ್ದಾರರಲ್ಲ.
4. ಸಲ್ಲಿಸಿರುವ ದಾಖಲೆಗಳು / ಮಾಹಿತಿಗಳು ತಪ್ಪೆಂದು ದೃಢಪಟ್ಟಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಗೊಳಿಸುವ ಅಧಿಕಾರವನ್ನು ಪ್ರಾಧಿಕಾರದ ಆಯುಕ್ತರು ಹೊಂದಿರುತ್ತಾರೆ.

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ/22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-ಬಿ) ರ ಅಡಿಯಲ್ಲಿ ಅಂತಿಮ ವಸತಿ ಬಡಾವಣೆ ನಕ್ಷೆ ಅನುಮೋದನೆಯನ್ನು ಶ್ರೀ. ರಮೇಶ್.ಬಿ.ಕೆ ಮತ್ತು ಇತರರ ಜಿಪಿಎದಾರರಾದ ಮೆ: ಎಂ.ಆರ್. ಇನ್ಫ್ರಾ ರವರ ಪರವಾಗಿ ನೀಡುವ ಬಗ್ಗೆ.

---

5. ಇತರೇ ಇಲಾಖೆ / ಸಂಸ್ಥೆಗಳಿಂದ [BDA ತಾಂತ್ರಿಕ ಶಾಖೆ, BESCOM, BWSSB, RERA ಮತ್ತು ಇತರೇ ಇಲಾಖೆಗಳು] ನೀಡಿರುವ ದೃಢೀಕರಣ / ನಿರಾಕ್ಷೇಪಣಾ ಪತ್ರಗಳಲ್ಲಿನ ಷರತ್ತುಗಳನ್ನು ಹಾಗೂ ದಿನಾಂಕ 30.11.2021 ರ ಕಾರ್ಯಾದೇಶದಲ್ಲಿನ ಇತರೆ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಈಗಾಗಲೇ ನೀಡಿರುವ ಮುಚ್ಚಳಿಕೆ ಪತ್ರಗಳಿಗೆ ಬದ್ಧರಿರತಕ್ಕದ್ದು.
6. ವಸತಿ ವಿನ್ಯಾಸದಲ್ಲಿನ ರಸ್ತೆಗಳು, ಉದ್ಯಾನವನ / ಬಯಲು ಜಾಗಗಳು, ಪಬ್ಲಿಕ್ ಯುಟಿಲಿಟಿ, ಮತ್ತು ರಸ್ತೆ ಪ್ರದೇಶ ಹಾಗೂ ಇತರೆ ಸಾರ್ವಜನಿಕ ಉಪಯೋಗದ ಜಾಗಗಳು ಯಾವುದೇ ರೀತಿಯ ಒತ್ತುವರಿ ಯಾಗದಂತೆ ಮುಂಜಾಗ್ರತೆ ಕ್ರಮ ವಹಿಸತಕ್ಕದ್ದು.
7. ವಸತಿ ಬಡಾವಣೆಯಲ್ಲಿ ಕನಿಷ್ಠ 30% ಕಟ್ಟಡಗಳು ನಿರ್ಮಾಣವಾಗುವವರೆಗೆ ವಸತಿ ಬಡಾವಣೆಯನ್ನುವಸತಿ ವಿನ್ಯಾಸದಾರರೇ ನಿರ್ವಹಣೆ ಮಾಡತಕ್ಕದ್ದು ಮತ್ತು ವಸತಿ ಬಡಾವಣೆಯನ್ನು ಸುಸ್ಥಿತಿಯಲ್ಲಿಡುವುದು.
8. ಪ್ರಾಧಿಕಾರದಿಂದ ದಿನಾಂಕ 30.11.2021 ರಂದು ನೀಡಿರುವ ತಾತ್ಕಾಲಿಕ ಮಾರ್ಪಾಡಿತ ಕಾರ್ಯಾದೇಶದಲ್ಲಿನ ಷರತ್ತುಗಳನ್ನು ತಪ್ಪದೇ ಪಾಲಿಸಕ್ಕದ್ದು.
9. ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ ಕಂದಾಯ ರೆವಿನ್ಯೂ ಸರ್ವೆ ನಕ್ಷೆ ಮತ್ತು ಗ್ರಾಮ ನಕ್ಷೆ ಅಥವಾ ಅನುಮೋದಿತ ಮಹಾಯೋಜನೆ RMP-2015 ರ ಅನುಸಾರ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿಯುವಿಕೆಗೆ ಅಡಚಣೆ ಉಂಟು ಮಾಡದೇ ಸರಾಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು.

ಮೇಲ್ಕಂಡ ಷರತ್ತುಗಳಿಗೊಳಪಡಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ಸಂಖ್ಯೆ: 15/2, 15/3 ಮತ್ತು 16 ರಲ್ಲಿನ 5 ಎಕರೆ 22 ಗುಂಟೆ/22459.87 ಚ.ಮೀ (0-02 ಗುಂಟೆ ಖರಾಬು ಮತ್ತು 0-10 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-ಬಿ] ರ ಅಡಿಯಲ್ಲಿ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಮತ್ತು ಅಂತಿಮ ವಸತಿ ನಿವೇಶನಗಳ ಬಿಡುಗಡೆ ಆದೇಶ ನೀಡಲಾಗಿದೆ.

ಆಯುಕ್ತರು,

ಬೆಂಅಪ್ರಾ, ಬೆಂಗಳೂರು.

ಇವರಿಗೆ,

ಮೆಃ ಎಂ.ಆರ್. ಇನ್ಫ್ರಾ,

# 26/2, ವಸಂತಪುರ ಮುಖ್ಯ ರಸ್ತೆ,

ವಸಂತಪುರ, ಬೆಂಗಳೂರು.